KARNATAKA SUCCESS NO 1
Kannada Daily
ಸಂಪಾದಕರು/ಮಾಲೀಕರು
ರಾಧಿಕಾ ಎ.ಆರ್.
Volume: 02 Issue-125
ಭಾನುವಾರ 16 ಮಾರ್ಚ್ 2025
Price: 2.00 Rs. Pages-2

RNI: KARKAN/2023/88508

ಕರ್ನಾಟಕ ಸಕ್ಸಸ್ ನಂ 1

ಕನ್ನಡ ದಿನಪತ್ರಿಕೆ

ನಮ್ಮ ಸಂಪರ್ಕ: ಇ-ಮೇಲ್: karnatakasuccessno1ar@gmail.com ಮೊಬೈಲ್: 9380988530, 9606988508

ತಿಪಟೂರು : ಶಾಲಾ ಶಿಕ್ಷಣ ಇಲಾಖೆವತಿಯಿಂದ ತುಮಕೂರಿನ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಜಿಲ್ಲಾಮಟ್ಟದ ಟೇಬಲ್ ಟೆನ್ನಿಸ್ ಕ್ರೀಡಾಕೂಟದಲ್ಲಿ ಪುರುಷರ ವಿಭಾಗದ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗದಲ್ಲಿ ತಿಪಟೂರು ತಾಲ್ಲೂಕಿನ ತಂಡವು ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮುಟ್ಟಿನ ರಜೆ; ಸಮಾನ ವೇತನ ಮತ್ತು ಅವಕಾಶಗಳಿಗೆ ಒತ್ತಾಯ

ತುಮಕೂರು: ಜಗತ್ತಿನ ಮಹಿಳಾ ಕಾರ್ಮಿಕರ ಹೋರಾಟದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹೊರಹೊಮ್ಮಿದೆ. ಕ್ರೂರ ವರ್ಗ ಶೋ?ಣೆ ಮತ್ತು ಅಮಾನವೀಯ ಕೆಲಸದ ಪರಿಸ್ಥಿತಿಗಳ ವಿರುದ್ಧ ಇಪ್ಪತ್ತನೇ ಶತಮಾನದಲ್ಲಿನ ಮಹಿಳಾ ಕಾರ್ಮಿಕರ ಹೋರಾಟವೆ ಮಹಿಳಾ ದಿನಾಚರಣೆಗೆ ನಾಂದಿಯಾಯಿತು. ಮಹಿಳೆಯರಿಗೆ ರಾಜಕೀಯ ಹಕ್ಕು, ಮತದಾನದ ಹಕ್ಕು, ಸಮಾನತೆಯ ಹಕ್ಕುಗಳ ಅಶಯದ ಮಹಿಳಾ ದಿನವನ್ನು ಬಂಡವಾಳ ಶಾಹಿ ವ್ಯವಸ್ಥೆ ಇದನ್ನು ಅವಕಾಶವಾಗಿಸುವ/ ಸರಕಾಗಿಸಿ ತನ್ನ ಲಾಭವನ್ನು ಹೆಚ್ಚಿಸಿ ಕೊಳ್ಳುತ್ತಿರುವ ನಡೆಗಳನ್ನು ಮಹಿಳೆಯರು ಅರ್ಥ ಮಾಡಿಕೊಳ್ಳಬೇಕು ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ಕಮಲ ಅವರು ಅಭಿಪ್ರಾಯ ಪಟ್ಟರು.

ಅವರು ಜಿಲ್ಲಾಧಿಕಾರಗಳ ಕಛೇರಿ ಎದುರು ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ಸಿಐಟಿಯು ತುಮಕೂರು ಜಿಲ್ಲಾ ಸಮಿತಿಯು ಅಯೋಜಿಸಿದ್ದ 117 ನೇ ದುಡಿಯುವ ಮಹಿಳೆಯರ ದಿನಾಚರಣೆಯ ಭಾಗವಾದ ಹಕ್ಕೋತ್ತಾಯ ಧರಣಿಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರಿದು ಮಾತನಾಡಿದ ಅವರು ಭಾರತದಲ್ಲಿನ ಮಹಿಳೆಯರು ಅತ್ಯಂತ ಶೋಚನೀಯ ಪರಿಸ್ಥಿತಿಯನ್ನು ಎದುರಿಸುತ್ತಿದಾರೆ. ಮಹಿಳೆಯರ ಹಕ್ಕುಗಳ ಮೇಲಿನ ದಾಳಿಗಳು ಹೆಚ್ಚುತ್ತಿವೆ. ತಾರತಮ್ಯ ಅಧಿಕವಾಗುತ್ತಿದೆ. ಸರ್ಕಾರಗಳು ಬರಿ ಮಾತಿನಲ್ಲಿ ಮಹಿಳಾ ಪರತೆಯನ್ನು ತೋರುತ್ತಿದ್ದಾರೆ. ನೀತಿಗಳಲ್ಲಿ ಮಹಿಳಾ ವಿರೋಧಿತನ ಇದೆ ಎಂದು ಅರೋಪಿಸಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕರಾದ ಎಸ್. ಡಿ. ಪಾರ್ವತಮ್ಮ ಅವರು ಮಾತನಾಡಿ ಮಹಿಳೆಯರೇ ಮನೆಯ ಖರ್ಚುಗಳನ್ನು ಅನಿವಾರ್ಯವಾಗಿ ನಿರ್ವಹಿಸಲೇ ಬೇಕಾದ ಪರಿಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ. ಮಹಿಳೆಯರು ಸಾಲದ ಸುಳಿಗೆ ಸಿಲುಕಿದ್ದಾರೆ. ಖಾಸಗಿ ಕಿರು ಹಣಕಾಸು ಸಂಸ್ಥೆಗಳ ಬಲವಂತವು ಮಹಿಳೆಯರನ್ನು ದೊಡ್ಡ ಮೊತ್ತಕ್ಕಾಗಿ ಒತ್ತಾಯಿಸುತ್ತಿದೆ. ಅದರ ಪರಿಣಾಮವಾಗಿ ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದೆ. ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗವನ್ನು ಮರೆಮಾಚುವುದಕ್ಕಾಗಿ ಸರಕಾರಗಳು ತಪ್ಪು ಅಂಕಿ ಅಂಶಗಳನ್ನು ಪ್ರಕಟಿಸುತ್ತಿವೆ. ಸ್ವಂತ ಮನೆಯ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರನ್ನೂ ಕೂಡಾ ಉದ್ಯೋಗಿಗಳು ಎಂದು ಬಿಂಬಿಸಲಾಗುತ್ತಿದೆ.

ಅಂಗನವಾಡಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುಲ್ಜಾರ್ ಬಾನು, ಮನೆ ಕೆಲಸಗಾರರ ಸಂಘದ ಅನುಸೂಯ, ಜನವಾದಿ ಮಹಿಳಾ ಸಂಘಟನೆ ಜಿಲ್ಲಾ ಸಂಚಾಲಕಿ ಟಿ.ಆರ್ ಕಲ್ಪನಾ ಅವರು ಮಾತನಾಡಿ ದರು.

ಅಂಗನವಾಡಿ ನೌಕರರ ಸಂಘದ ಅನಸೂಯ, ಗೌರಮ್ಮ. ಜಬೀನಾ ಖಾತೋನ್. ಸುಶಿಲಾ, ಅಧಿಲಕ್ಷ್ಮಿ, ಸುಕನ್ಯಾ, ಗಂಗಾ ಕಟ್ಟಡ ಕಾರ್ಮಿಕರ ಸಂಘ ಗಂಗಮ್ಮ, ಮನೆ ಕೆಲಗಾರರ ಸಂಘದ ಪಲ್ಲವಿ ,ಸಿಐಟಿಯು ಸೈಯದ್ ಮುಜಿಬ್. ಎ. ಲೊಕೇಶ್,ಎನ್.ಕೆ. ಸುಬ್ರಮಣ್ಯ, ತಾಲ್ಲುಕು ಸಂಚಾಲಕ,ರಂಗಧಾಮಯ್ಯ, ಕಟ್ಟಡ ಕಾರ್ಮಿಕರ ಸಂಘ ಕಲಿಲ್, ಆಟೋ ಚಾಲಕೆ ಸಂಘ ಇಂತಿಯಾಜ್ ಇದ್ದರು. ಜಿಲ್ಲಾಧಿಕಾರಿಗಳ ಪರವಾಗಿ ಮೋಹನ್ ಅವರು ಮನವಿ ಪತ್ರ ಸ್ವೀಕರಿಸಿದರು.

ಮಾ.18: "ವಿಶ್ವ ಗ್ರಾಹಕರ ದಿನಾಚರಣೆ"

ತುಮಕೂರು: ಜಿಲ್ಲಾಡಳಿತ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಗಳ ಇಲಾಖೆ, ಕಾನೂನು ಮಾಪನಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ವಿದ್ಯೋದಯ ಕಾನೂನು ಕಾಲೇಜಿನ ಸಹಯೋಗದಲ್ಲಿ ಮಾರ್ಚ್ 18ರಂದು ಬೆಳಿಗ್ಗೆ 11 ಗಂಟೆಗೆ ನಗರದ ವಿದ್ಯೋದಯ ಕಾನೂನು ಕಾಲೇಜಿನಲ್ಲಿ "ವಿಶ್ವ ಗ್ರಾಹಕರ ದಿನಾಚರಣೆ" ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಜಿ.ಟಿ. ವಿಜಯಲಕ್ಷ್ಮೀ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧ್ಯಕ್ಷತೆವಹಿಸ ಲಿದ್ದಾರೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿ.ಪ್ರಭು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ನಿವೇದಿತಾ ರವೀಶ್, ಹೆಚ್.ಎಸ್. ರಾಜು, ವಿದ್ಯೋದಯ ಕಾನೂನು ಕಾಲೇಜಿನ ಪ್ರಾಂಶುಪಾಲೆ ಶಮಾ ಸೈಯಿದಿ ಪಾಲ್ಗೊಳ್ಳಲಿ ದ್ದಾರೆ.

ಗ್ರಾಹಕರ ಜಾಗೃತಿ ಹಕ್ಕು ಮತ್ತು ಶಿಕ್ಷಣ ಪರಿಷತ್ತಿನ ಕಾರ್ಯದರ್ಶಿ ಹಾಗೂ ವಕೀಲ ಟಿ.ಎಸ್. ನಿರಂಜನ್ ಗ್ರಾಹಕರ ದಿನಾಚರಣೆ ಕುರಿತು ಮಾಹಿತಿ ನೀಡಲಿದ್ದಾರೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಡಾ: ಮಂಟೇಸ್ವಾಮಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಎನ್. ರವೀಶ್, ವಿದ್ಯೋದಯ ಕಾನೂನು ಕಾಲೇಜಿನ ಐ.ಕ್ಯೂ.ಎ.ಸಿ. ಸಂಯೋಜಕ ಎನ್.ಹೆಚ್. ಕುಮಾರ್ ಜಂಟಿಯಾಗಿ ತಿಳಿಸಿದ್ದಾರೆ.

'ಕೇಂದ್ರ ಸರ್ಕಾರದ ಅನುದಾನದಲ್ಲಿ ಲೆವೆಲ್ ಕ್ರಾಸಿಂಗ್ ಕಾಮಗಾರಿಗಳು'

ವಿವಿಧ ರೈಲ್ವೇ ಸೇತುವೆ ಕಾಮಗಾರಿಗಳಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಶಿಲಾನ್ಯಾಸ

ತುಮಕೂರು: ನಗರದ ಶೆಟ್ಟಿಹಳ್ಳಿ ಹಳೆಯ ರೈಲ್ವೆಗೇಟ್ ಬಳಿ ಪಾದಚಾರಿ ಸುರಂಗ ಮಾರ್ಗ ಕಾಮಗಾರಿಗೆ ಹಾಗೂ ಭೀಮಸಂದ್ರದ ರೈಲ್ವೆ ಕೆಳ ಸೇತುವೆ ಕಾಮಗಾರಿಗಳಿಗೆ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಶನಿವಾರ ಶಿಲಾನ್ಯಾಸ ನೆರವೇರಿಸಿದರು.

ನಗರದ ಶೆಟ್ಟಿಹಳ್ಳಿ ರೈಲ್ವೆಗೇಟ್‌ನಲ್ಲಿ ಈಗಾಗಲೇ ರಸ್ತೆ ಕೆಳ ಸೇತುವೆಯನ್ನು ನಿರ್ಮಿಸ ಲಾಗಿದ್ದು, ಈ ಕೆಳ ಸೇತುವೆ ಮೂಲಕ ವಾಹನಗಳ ಸಂಚರಿಸುತ್ತಿವೆ. ಆದರೆ ವಾಹನ ದಟ್ಟೆ ಇರುವ ಕಾರಣ ಅಂಡರ್‌ಪಾಸ್‌ನಲ್ಲಿ ಪಾದಚಾರಿಗಳು ಸಂಚರಿಸುವುದು ಕಷ್ಟಕರವಾಗಿ ರುವುದನ್ನು ಮನಗಂಡ ಸಚಿವ ಸೋಮಣ್ಣ ಅವರು 2.49 ಕೋಟಿ ರೂ. ವೆಚ್ಚದಲ್ಲಿ ಪಾದಚಾರಿ ಸುರಂಗ ಮಾರ್ಗ ಕಾಮಗಾರಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಸಚಿವ ಸೋಮಣ್ಣ ಅವರು, ರಾಜ್ಯದಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಕಾಮಗಾರಿಗಳಿಗೆ ಈ ಹಿಂದೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಹಣ ನೀಡುತ್ತಿದ್ದವು. ಆದರೆ ಇತ್ತೀಚೆಗೆ ರಾಜ್ಯ ಸರ್ಕಾರ ಗಳು ಹಣ ಬಿಡುಗಡೆ ಮಾಡದಿರುವುದನ್ನು ಗಮನಿಸಿದ ಕೇಂದ್ರ ಸರ್ಕಾರ ಲೆವೆಲ್ ಕ್ರಾಸಿಂಗ್ ಮೇಲ್ಸೇತುವೆ ಮತ್ತು ಕೆಳ ಸೇತುವೆ ಕಾಮಗಾರಿ ಗಳಿಗೆ ಸಂಪೂರ್ಣ ಹಣವನ್ನು ಬಿಡುಗಡೆ ಮಾಡುತ್ತಿದೆ ಎಂದರು.

ದೇಶಾದ್ಯಂತ ಎಲ್ಲ ಕಡೆಗಳಲ್ಲಿ ಲೆವೆಲ್ ಕ್ರಾಸಿಂಗ್ ಕಾಮಗಾರಿಗಳನ್ನು ಕೇಂದ್ರ ಸರ್ಕಾರವೇ ಮಾಡುತ್ತಿದೆ ಎಂದು ಅವರು ಹೇಳಿದರು. ಏಪ್ರಿಲ್ 30 ರೊಳಗೆ ಸುಮಾರು 700 ಕೋಟಿ ರೂ. ವೆಚ್ಚದಲ್ಲಿ ತುಮಕೂರು ಹಾಗೂ ಹಾಸನ ಜಿಲ್ಲೆಯ ಲೆವೆಲ್ ಕ್ರಾಸಿಂಗ್ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಈ ಕಾಮಗಾರಿಗಳನ್ನು ಮುಂಬರುವ 2027 ರೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ಅವರು ಹೇಳಿದರು.

ನಾನು ಕೇಂದ್ರ ಸಚಿವನಾದ 9 ತಿಂಗಳಲ್ಲಿ ಜಿಲ್ಲೆಯ ಬಹುತೇಕ ರೈಲ್ವೆ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಿಸಿದ್ದೇನೆ. ಕೇವಲ ಕರ್ನಾಟಕ ವಲ್ಲದೆ ದೇಶದ ಇತರೆ ರಾಜ್ಯಗಳ ರೈಲ್ವೆ ಕಾಮಗಾರಿಗಳಿಗೂ ಪ್ರಧಾನಿ ನರೇಂದ್ರ ಮೋದಿಯವರು ಅನುದಾನ ನೀಡಿದ್ದಾರೆ ಎಂದರು.

ರೈಲ್ವೆ ಇಲಾಖೆ ರಕ್ಷಣಾ ಇಲಾಖೆಯ ಮತ್ತೊಂದು ಮುಖವಾಗಿ ಕೆಲಸ ಮಾಡುತ್ತಿದೆ. ಹಾಗಾಗಿ ಇಂದು ಶಿಲಾನ್ಯಾಸ ನೆರವೇರಿಸಿರುವ ಪಾದಚಾರಿ ಸುರಂಗ ಮಾರ್ಗ ಹಾಗೂ ಭೀಮಸಂದ್ರದ ಬಳಿ ರೈಲ್ವೆ ಕೆಳ ಸೇತುವೆ ಕಾಮಗಾರಿಗಳನ್ನು ಮುಂದಿನ 7 ತಿಂಗಳೊಳಗೆ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜ್ಯೋತಿಗಣೇಶ್, ಸುರೇಶ್‌ಗೌಡ, ಮಾಜಿ ಸಂಸದ ಜಿ.ಎಸ್. ಬಸವರಾಜು, ಮಹಾನಗರ ಪಾಲಿಕೆ ಆಯುಕ್ತ ಅಶ್ವಿಜ, ರೈಲ್ವೆ ಇಲಾಖೆಯ ಬೆಂಗಳೂರು ವಿಭಾಗೀಯ ವ್ಯವಸ್ಥಾಪಕ ಅಮಿತೇಶ್‌ಕುಮಾರ್ ಸಿನ್ಹಾ, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್ಪೂರಿಯಾ, ಕೃಷ್ಣಚೈತನ್ಯ, ಮಂಜುನಾಥ ಕನಮಡಿ, ರಾಜೀವ್ ಶರ್ಮಾ, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್ ಹೆಬ್ಬಾಕ, ವೈ.ಹೆಚ್. ಹುಚ್ಚಯ್ಯ, ಪಾಲಿಕೆ ಮಾಜಿ ಸದಸ್ಯ ಮಲ್ಲಿಕಾರ್ಜುನಯ್ಯ, ವೇದಮೂರ್ತಿ, ರುದ್ರೇಶ್, ಹನುಮಂತರಾಜು ಮತ್ತಿತರರು ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಇಂಗ್ಲೀಷ್ ಪರೀಕ್ಷೆ : 1098 ವಿದ್ಯಾರ್ಥಿಗಳು ಗೈರು ಹಾಜರಿ

ತುಮಕೂರು: ಜಿಲ್ಲೆಯಲ್ಲಿ ಇಂದು ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರ ಇಂಗ್ಲೀಷ್ ವಿಷಯದಲ್ಲಿ 1098 ವಿದ್ಯಾರ್ಥಿಗಳು ಗೈರು ಹಾಜರಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕ ಬಾಲಗುರುಮೂರ್ತಿ ತಿಳಿಸಿದ್ದಾರೆ.

ಇಂಗ್ಲೀಷ್ ವಿಷಯಕ್ಕೆ ಒಟ್ಟು 24392 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಈ ಪೈಕಿ 23294 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಛೇರಿ ಮುಂದೆ ಕೆಆರ್‌ಎಸ್ ಪಕ್ಷದ ಪ್ರತಿಭಟನೆ

ತುಮಕೂರು: ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಯನ್ನು ತಡೆಗಟ್ಟಬೇಕು. ಮುಂದೆ ಜಿಲ್ಲೆಯ ಜನತೆಗೆ ಉತ್ತಮ ಜೀವನ ಕಟ್ಟಿಕೊಳ್ಳಲು ಮಣ್ಣು, ಪ್ರಕೃತಿ ಯ ಆಸರೆ ಬೇಕೆ ಬೇಕು. ತುಮಕೂರಿನವರು ಇಲ್ಲೇ ಹುಟ್ಟಿದ್ದೇವೆ ಇಲ್ಲೇ ಸಾಯುತ್ತೇವೆ. ಆದರೆ ಇಲ್ಲಿನ ಭೂಮಿಯನ್ನು ಭ್ರಷ್ಟರಿಗೆ ಹಾಳು ಮಾಡಲು ಬಿಟ್ಟು ನಾವು ಮಂಗಳ ಗ್ರಹಕ್ಕೆ ಹೋಗುವುದಿಲ್ಲ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಉಪಾಧ್ಯಕ್ಷ ಜ್ಞಾನ ಸಿಂಧು ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿನ ಭ್ರಷ್ಟಾಚಾರ ವಿರೋಧಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಶನಿವಾರ ಕೆಆರ್‌ಎಸ್ ಪಕ್ಷದ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು.

ಜಿಲ್ಲೆಯ ಜನತೆಗೆ ಬದುಕಲು ಯೋಗ್ಯವಾದ ಪರಿಸರ ಅಗತ್ಯ. ಜಿಲ್ಲೆಯಲ್ಲಿರುವ ಪರಿಸರನ್ನು ಬೇರೆ ಕಡೆಯಿಂದ ಬಂದ ಅಧಿಕಾರಿಗಳು ಹಣ ತಿಂದು ಭ್ರಷ್ಟಾಚಾರ ಮೂಲಕ ಮಲೀನ ಮಾಡುವುದಲ್ಲದೇ ನೆಲದ ಮಕ್ಕಳಿಗೆ ಮಣ್ಣು ಮುಕ್ಕಿಸುತ್ತಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ವ್ಯಾಪಕ ಲಂಚಬಾಕುತನ ತಾಂಡವವಾಡುತ್ತಿದೆ. ಒಂದು ಚಿಕ್ಕ ದಾಖಲೆ ಪಡೆಯಲು ನಾಡಕಚೇರಿಯಿಂದ ಹಿಡಿದು ಜಿಲ್ಲಾಮಟ್ಟದ ಕಚೇರಿಗಳ ವರೆಗೆ ಲಂಚ ನೀಡಬೇಕಾದ ಪರಿಸ್ಥಿತಿ ಎದುರಾಗಿದೆ. ಜಿಲ್ಲೆಯ ಜನರ ಹಿತ ಕಾಪಾಡುವುದು ಅಧಿಕಾರಿಗಳ ಕರ್ತವ್ಯ. ಅದು ಬಿಟ್ಟು ಜಿಲ್ಲೆಯ ಪೃಥ್ವಿಯನ್ನೇ ಕೊಳ್ಳೆ ಹೊಡೆಯುವುದಲ್ಲ ಎಂದು ಆರೋಪಿಸಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಭಟ್ಟರಹಳ್ಳಿ ಮಾತನಾಡಿ, ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಮನಸ್ಸಿಗೆ ಬಂದ ಕಡೆಗಳಲ್ಲಿ ಗಣಿಗಾರಿಕೆ ಮಾಡಲು ಅವಕಾಶ ನೀಡಿದ್ದಾರೆ. ಇವರಿಗೆ ಅವಕಾಶ ನೀಡಲು ಕಾನೂನಿನಲ್ಲಿ ರೈಟ್ಸ್ ಇಲ್ಲ. ಎಲ್ಲಿ ಗಣಿಗಾರಿಕೆ ನಡೆಸಬೇಕು ಎಂದು ಪ್ರಸ್ತಾವ ಬಂದಾಗ ಆ ಪ್ರದೇಶದ ಸುತ್ತಮುತ್ತಲಿನ ಜನರನ್ನ ಖುದ್ದಾಗಿ ಭೇಟಿ ಮಾಡಿ ಇಲ್ಲಿ ಆರಂಭ ಮಾಡಬಹುದೇ ಎಂಬುವುದನ್ನು ಪಡೆದು, ಸ್ಥಳೀಯ ಆಡಳಿತದ ಅನುಮತಿ ಪಡೆಯಬೇಕು. ಆದ್ರೆ ಡಿಸಿ ಕಚೇರಿಯಲ್ಲಿ ಎಸಿ ರೂಂನಲ್ಲಿ ಕೂತು ಬಡವರ ರಕ್ತ ಹೀರುವುದನ್ನು ನಿಲ್ಲಿಸಬೇಕು ಎಂದು ಮಾರ್ಮಿಕವಾಗಿ ನುಡಿದರು.

ಮೀನುಗಾರಿಕೆ ಇಲಾಖೆಯಿಂದ ಕಾರ್ಯಾದೇಶ ಪಡೆದು ಮೀನುಗಾರಿಕಾ ಘಟಕಗಳನ್ನು ನಿರ್ಮಿಸಿ ಎರಡು ವರ್ಷ ಅಲೆದಾಟ ಮಾಡಿದರು ಸಹಾಯದನ ಬಿಡಯಗಡೆಯಾಗದೆ ಇರುವುದಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದು, ಸಹಾಯಧನ ಬಿಡುಗಡೆಯಾಗುತ್ತದೆ ಎಂದು ನಂಬಿಕೊಂಡು ಸಾಲ ಸೋಲ ಮಾಡಿ ವಿವಿಧ ಘಟಕಗಳನ್ನು ನಿರ್ಮಿಸಿ ಎರಡು ವರ್ಷಗಳೇ ಕಳೆಯುತ್ತ ಬಂದಿದೆ. ಈ ಬಗ್ಗೆ ನೂರಾರು ಬಾರಿ ಪತ್ರ ನೀಡಿ ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಜಿಲ್ಲಾಡಳಿತ, ಇಲಾಖೆ ಲಂಚ ಬೇಕಿದ್ದರೆ ಬಹಿರಂಗವಾಗಿ ಕೇಳಲಿ ಎಂದು ಇತ್ತೀಚೆಗೆ ನೇರವಾಗಿ ಅಧಿಕಾರಿಗಳನ್ನು ಕೇಳಿದ್ದರು. ಆದ್ರೆ, ಶನಿವಾರದ ಪ್ರತಿಭಟನೆ ವೇಳೆ ಅರ್ಹ ಲಾನುಭವಿ ರೈತರು ಮತ್ತು ಸಾರ್ವಜನಿಕರಿಂದ ಮಡಿಕೆಯಲ್ಲಿ ಸಂಗ್ರಹಿಸಿ ರೈತ ಮುಖಂಡ ಪರಮಶಿಯ್ಯ ಮತ್ತು ಇತರೆ ರೈತರು ಜಿಲ್ಲಾಡಳಿತಕ್ಕೆ ನೀಡಿ, ಮುಜುಗರವನ್ನುಂಟು ಮಾಡಿದರು.

ಜಿಲ್ಲೆಯ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಕಚೇರಿ ಮುಂಭಾಗ ಪ್ರತಿಭಟನೆ ಮಾಡುತ್ತಿದ್ದಾಗ ಸ್ಥಳಕ್ಕೆ ಬಂದ ಅಪರ ಜಿಲ್ಲಾಧಿಕಾರಿ ಡಾ.ತಿಪ್ಪೇಸ್ವಾಮಿ ಅವರು ಇಲ್ಲಿ ಗಲಾಟೆ ಮಾಡಲು ಬಂದಿದ್ದೀರಾ, ಸಮಸ್ಯೆ ಇದ್ದರೆ ಮನವಿ ಕೊಟ್ಟು ಹೋಗಿ ಎಂದರು. ಆಗ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿ ಕಚೇರಿ ಅಧಿಕಾರಿಗಳು, ಪೊಲೀಸರು ಮತ್ತು ಪಕ್ಷದ ಕಾರ್ಯಕರ್ತರ ಮಧ್ಯೆ ವಾಗ್ವಾದ ನಡೆಯಿತು ಪಕ್ಷದ ಮುಖಂಡರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುವ ನಿಯಮಗಳನ್ನು ಪಾಲಿಸಿ ಎಂದು ತಾಕಿತ್ತು ಮಾಡಿದರು.

ಭಗವಂತನ ಸ್ಮರಣೆಯಿಂದ ನಿತ್ಯೋತ್ಸವ: ಪೇಜಾವರ ಶ್ರೀಗಳು

ತುಮಕೂರು: ಮನುಷ್ಯನ ಬದುಕಿನಲ್ಲಿ ಸಂತಸ, ಸತ್ಕೀರ್ತಿ, ನೆಮ್ಮದಿ ನಿರಂತರವಾಗಿ ನೆಲೆಸಬೇಕಾದರೆ ಅದಕ್ಕೆ ಭಗವಂತನ ಪ್ರಾರ್ಥನೆ ಅನಿವಾರ್ಯ ಹಾಗೂ ಅತ್ಯವಶ್ಯಕ ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳು ಅಭಿಪ್ರಾಯಪಟ್ಟರು.

ಅವರು ಇಂದು ಬೆಳಗ್ಗೆ (ಮಾರ್ಚ್ 15

ತುಮಕೂರಿನ ಪ್ರಯಾಣಿಕರೊಬ್ಬರು ಆಟೋದಲ್ಲೇ ಬಿಟ್ಟುಹೋಗಿದ್ದ ಸುಮಾರು 4 ಲಕ್ಷರೂ. ಮೌಲ್ಯದ 52 ಗ್ರಾಂ ಚಿನ್ನದ ಒಡವೆಗಳನ್ನು ಮಾಲಿಕರಿಗೆ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದ ನಗರ ಪಾಲಿಕೆ ಗುತ್ತಿಗೆ ನೌಕರ ಹಾಗೂ ಆಟೋ ಚಾಲಕ ರವಿಕುಮಾರ್ ಅವರನ್ನು ಸಮಾಜ ಸೇವಕ, ಆರ್ಯವೈಶ್ಯ ಹಾಗೂ ಕಾಂಗ್ರೆಸ್ ಮುಖಂಡ ನಟರಾಜು ಸನ್ಮಾನಿಸಿ, ಗೌರವಿಸಿದರು.

ವಿಠಲಾಪುರ ಗ್ರಾಮದಲ್ಲಿ ಕೈವಾರ ತಾತಯ್ಯನವರ 299 ನೇ ಜಯಂತೋತ್ಸವ

ಮಧುಗಿರಿ: ಯೋಗಿ ನಾರೇಯಣ ಯತೀಂದ್ರರು ಕೈವಾರ ತಾತಯ್ಯ ಎಂದೇ ಪ್ರಸಿದ್ಧರಾಗಿದ್ದು ಬಾಲ್ಯದಿಂದಲೂ ಆಧ್ಯಾತ್ಮಿಕ ಕಡೆಗೆ ತಮ್ಮ ಒಲವನ್ನು ತೋರುವ ಮೂಲಕ ತಮ್ಮ ಅನುಭವಗಳನ್ನು ಹಂಚಿ ಕೊಂಡು ಮಹಾನ್ ಕಾಲಜ್ಞಾನಿಯಾಗಿದ್ದಾರೆ ಎಂದು ಕಂಟಲಗೆರೆ ಸಣ್ಣ ಹೊನ್ನಯ್ಯ ತಿಳಿಸಿದರು.

ತಾಲೂಕಿನ ಮಿಡಗೇಶಿ ಹೋಬಳಿಯ ವಿಠಲಾಪುರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕೈವಾರ ತಾತಯ್ಯನವರ 299 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ತಾತಯ್ಯನವರು ಆಧ್ಯಾತ್ಮಿಕ ಚಿಂತಕರು, ಹರಿಕಾರರು ಆಗಿದ್ದರು. ವಿವಾಹದ ನಂತರ ತನ್ನ ಜೀವನದ ಜವಾಬ್ದಾರಿಯನ್ನು ಹರಿತು ಬಳೆ ವ್ಯಾಪಾರಕ್ಕೆ ತೊಡಗಿಸಿಕೊಂಡರು ಅಲ್ಲಿ ತಾನು ಕಂಡ ಜನರ ಸಂಕಷ್ಟಗಳನ್ನು ನೋಡಿ ಅನುಭವವಾಗಿ ಅಂದಿನ ಸಮಾಜದ ಕಷ್ಟಗಳನ್ನು ಕೀರ್ತನೆಗಳಲ್ಲಿ ಆಡಿದರು.. ಇವರು ರಚಿಸಿದಂತಹ ಕೃತಿಗಳು ಶೋಷಣೆಗೆ ಒಳಗಾದ ವರ್ಗದವರ ಧ್ವನಿಯಾಗಿದೆ. ತಾತಯ್ಯನವರು ರಚಿಸಿದಂತಹ ಕೃತಿಗಳು ಕೀರ್ತನೆಗಳು ಜೀವನದಲ್ಲಿ ಅಳವಡಿಸಿಕೊಂಡಲ್ಲೇ ಉತ್ತಮ ಜೀವನ ನಡೆಸಲು ದಾರಿ ದೀಪಗಳಾಗಿವೆ. ಎಂದರು.

ತಾಲೂಕು ಬಲಿಜ ಸಂಘದ ಅಧ್ಯಕ್ಷ ಎಂಎಸ್ ಶಂಕರ್ ನಾರಾಯಣ ಮಾತನಾಡಿ ತಾತಯ್ಯನವರು ಕೇವಲ ಬಲಿಜನಾಂಗಕ್ಕೆ ಮೀಸಲಾಗಿರದೆ ಸಮಾಜದ ಎಲ್ಲ ಜನಾಂಗದ ಗುರುಗಳಾಗಿದ್ದಾರೆ ಅವರ ತತ್ವ ಆದರ್ಶಗಳು ಜೀವನದಲ್ಲಿ ಪ್ರತಿಯೊಬ್ಬರು ಅಳವಡಿಸಿ ಕೊಳ್ಳಬೇಕು ಜೀವನ ಸಾರ್ಥಕತೆಯನ್ನು ಪಡೆಯುತ್ತದೆ ಬಲಿಜ ಜನಾಂಗ ವಿದ್ಯಾವಂತರು ಬುದ್ಧಿವಂತರು ಆಗಿದ್ದು ಸಮಾಜದ ಒಳಿತಿಗೆ ಸಹಕರಿಸುವ ಜನಾಂಗವಾಗಿದೆ ಆದರೆ ಕೆಲವೊಮ್ಮೆ ಪ್ರತಿಷ್ಠೆಯನ್ನು ಬದಿಗೊತ್ತಿ ಸಮಾಜದ ಅಭಿವೃದ್ಧಿಗೆ ಹಾಗೂ ಜನಾಂಗದ ಒಳಿತಿಗೆ ಸಹಕಾರ ನೀಡುವ ಮನೋಭಾವ ತಾಳಬೇಕು ಈ ಗ್ರಾಮದಲ್ಲಿ ಜಯಂತೋತ್ಸವ ಬಹಳ ಅದ್ದೂರಿಯಾಗಿ ನೆರೆವೇರಿರುವುದು ಸಂಘಟನೆ ಮತ್ತು ಒಗ್ಗಟ್ಟಿನ ಪ್ರಯತ್ನವಾಗಿದೆ ಮುಂದೆ ಇನ್ನೂ ಹೆಚ್ಚಿನ ಕಾರ್ಯಕ್ರಮಗಳು ನಡೆಯುವಂತಾಗಲಿ ಇದಕ್ಕೆ ಅಗತ್ಯವಾದ ಸಹಕಾರ ತಾಲೂಕು ಬಳಗದಿಂದ ನೀಡಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಸಂಘದ ಉಪಾಧ್ಯಕ್ಷ ಕೆ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಎಂ ವೆಂಕಟರಾಮು ಸಹ ಕಾರ್ಯದರ್ಶಿ ಶ್ರೀನಿವಾಸ್ ಮೂರ್ತಿ ಭಾಗವಹಿಸಿದ್ದರು ಬಲಿಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ರಂಗಧಾಮಯ್ಯ ಮಾತನಾಡಿದರು. ಗೌರವಾಧ್ಯಕ್ಷ ಆಡಿಟರ್ ಗುರುಲಿಂಗಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು ಹಾಗೂ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಸರ್ವರನ್ನು ಸ್ಮರಿಸಿದರು.

ಶ್ರೀ ಅಗ್ನಿ ಬನ್ನಿರಾಯಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅನುದಾನ

ತುಮಕೂರು: ತುಮಕೂರು ಗ್ರಾಮಾಂತರ ತಾಲೂಕಿನ ಭೀಮಸಂದ್ರ ವಲಯದ ದಿಬ್ಬೂರು ಹೊಸಹಳ್ಳಿ ಗ್ರಾಮದ ಶ್ರೀ ಅಗ್ನಿ ಬನ್ನಿರಾಯಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾತಿಗೊಂಡಂತಹ ಒಂದು ಲಕ್ಷ ರೂ. ಡಿ ಡಿ ಯನ್ನು ಮಾನ್ಯ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ ಸರ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ತುಮಕೂರು ಗ್ರಾಮಾಂತರ ತಾಲೂಕಿನ ಯೋಜನಾಧಿಕಾರಿ ಸಂದೇಶ್ ಹಾಗೂ ವಲಯದ ಮೇಲ್ವಿಚಾರಕರು, ಸೇವಾ ಪ್ರತಿನಿಧಿ ಹಾಗೂ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೊಬ್ಬರಿ, ಪಡಿತರ ಅಕ್ಕಿ ಕಳ್ಳರ ಬಂಧನ

ತಿಪಟೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪಡಿತರ ಅಕ್ಕಿ, ಗೂಡ್ಸ್ ವಾಹನ, ಆಟೊ, ಕೊಬ್ಬರಿ, ಗುಜರಿ ವಸ್ತು, ತೆಂಗಿನಕಾಯಿ ಕದಿಯುತ್ತಿದ್ದ ಇಬ್ಬರನ್ನು ನಗರ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ದೊಡ್ಡಕವಲಂದೆಯ ಸದ್ದಾಂ ಹುಸೇನ್ (24), ಮೈಸೂರಿನ ಬಿಎಂಶ್ರೀ ನಗರದ ರಾಹೀಲ್ (22) ಬಂಧಿತರು.

ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜ. 27ರ ರಾತ್ರಿ ಎಪಿಎಂಸಿಯಲ್ಲಿ ಕೊಬ್ಬರಿ ತುಂಬಿದ್ದ ಚೀಲಗಳು ಕಳುವಾಗಿದ್ದವು. ಅಂಗಡಿಯ ಬಾಗಿಲು ಮುರಿದು ಕೊಬ್ಬರಿ ಕದ್ದಿದ್ದರು. ತಿಪಟೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಳ್ಳರನ್ನು ಬಂಧಿಸಿ, ?10 ಲಕ್ಷ ಮೌಲ್ಯದ ಕೊಬ್ಬರಿ, ಗೂಡ್ಸ್ ವಾಹನ, ಆಟೊ, ?1 ಲಕ್ಷ ನಗದು ಜಪ್ತಿ ಮಾಡಲಾಗಿದೆ.

ಆರೋಪಿಗಳು ವಿಚಾರಣೆ ವೇಳೆ ತಿಪಟೂರು ನಗರ, ನೊಣವಿನಕೆರೆ, ಹಾಸನದ ಗೋರೂರು, ನಾಗಮಂಗಲದ ಬೆಳ್ಳೂರು, ಮೈಸೂರಿನ ಕೆ.ಆರ್.ನಗರ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ ವಿಚಾರ ಬಾಯಿ ಬಿಟ್ಟಿದ್ದಾರೆ. ರಾಜ್ಯ ವಿವಿಧ ಠಾಣೆಗಳ ಸರಹದ್ದಿನ ಸರ್ಕಾರಿ ಗೋದಾಮುಗಳಲ್ಲಿ ಪಡಿತರ ಅಕ್ಕಿ, ತುರುವೇಕೆರೆ ವ್ಯಾಪ್ತಿಯಲ್ಲಿ ತೆಂಗಿನಕಾಯಿ ಕಳ್ಳತನ ಮಾಡಿದ ಮಾಹಿತಿಯೂ ಹೊರ ಬಂದಿದೆ.

ತಿಪಟೂರು ನಗರ ಠಾಣೆಯ ಇನ್‌ಸ್ಪೆಕ್ಟರ್ ಸಿ.ವೆಂಕಟೇಶ್, ಸಬ್‌ಇನ್‌ಸ್ಪೆಕ್ಟರ್ ಡಿ.ಕೃಷ್ಣಪ್ಪ, ಎಎಸ್‌ಐ ಎನ್.ಡಿ.ಚಿಕ್ಕಲಕ್ಕೇಗೌಡ, ಉಸ್ಮಾನ್ ಸಾಬ್, ಸಿಬ್ಬಂದಿ ಜಿ.ಎಂ.ಮೋಹನ್‌ಕುಮಾರ್, ಜಿ.ಆರ್.ಲೋಕೇಶ್, ಎ.ಪಿ.ಕಿರಣ್‌ಕುಮಾರ್, ಕೆ.ಎಸ್.ಯತೀಶ್‌ಕುಮಾರ್, ಎನ್.ಬಿ.ಪ್ರಭುಕುಮಾರ್, ಗಿರೀಶ್ ಎಂ.ಬಿ, ಮಂಜುನಾಥ ಎಂ.ಕೆ, ಮಧುಕುಮಾರ್, ರಮೇಶ್, ರಮೇಶ್ ಎಂ.ಎಸ್ ತಂಡ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.

ಎಸ್‌ಎಸ್‌ಐಟಿ ಆವರಣದಲ್ಲಿ ಎಫ್ ಕೆ ಸಿ ಸಿ ಐ ಉಪಾಧ್ಯಕ್ಷೆ ಉಮಾ ರೆಡ್ಡಿ ಮಹಿಳೆಯರಿಗೆ ಸಲಹೆ

ಮಹಿಳೆಯರು ಪುರುಷರಿಗೆ ಉದ್ಯೋಗ ಕೊಡುವಷ್ಟು ಯಶಸ್ಸು ಕಾಣಬೇಕು

ತುಮಕೂರು: ಹೆಣ್ಣು, ಹೊನ್ನು ಮಣ್ಣಿನಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನವಿದೆ ಮಹಿಳೆ ಇಂದು ಬಾಹ್ಯಾಕಾಶ ಗಗನಯಾನ ಸೇರಿದಂತೆ ವಿವಿಧ ವಲಯಗಳಲ್ಲಿ ಅಗಣಿತವಾದ ಸಾಧನೆಯನ್ನು ಮಾಡಿದ್ದು ಪುರುಷನ್ನು ಮೀರಿಸುವಂತಹ ಮಟಿಗೆ ಮಹಿಳೆ ಬೆಳೆದು ನಿಂತಿದ್ದಾಳೆ ಕಾರ್ಯೇಸು ದಾಸಿ, ಕ್ಷಮೆಯಾಧರಿತ್ರಿ ಎನ್ನುವ ಮಹಿಳೆ ಕೈಗಾರಿಕಾ ಕ್ಷೇತ್ರಕ್ಕೂ ಇಂದು ದಾಪುಗಾಲು ಇಡುತ್ತಿದ್ದು ಪುರು?ರಿಗೆ ಉದ್ಯೋಗ ನೀಡುವಷ್ಟು ಉನ್ನತ ಮಟ್ಟಕ್ಕೆ ಬೆಳೆಯಬೇಕಾಗಿದೆ ಎಂದು ಎಫ್ ಕೆ ಸಿ ಸಿ ಐ ಉಪಾಧ್ಯಕ್ಷರು ಹಾಗೂ ಹೈಟೆಕ್ ಮ್ಯಾಗ್ನೆಟಿಕ್ ಎಲೆಕ್ಟ್ರಾನಿಕ್ಸ್ ಪ್ರವೇಟ್ ಲಿಮಿಟೆಡ್ ನ ಮ್ಯಾನೇಜಿಂಗ್ ಡೈರೆಕ್ಟರ್ ಆದ ಉಮಾ ರೆಡ್ಡಿ ಅವರು ತಿಳಿಸಿದರು.

ನಗರದ ಸಿದ್ದಾರ್ಥ ಕ್ಯಾಂಪಾಸ್ ಆವರಣ ಪಿಜಿ ಸಂಭಾಂಗಣದ ದಲ್ಲಿ ಸಾಹೇ ವಿವಿ, ಸಿದ್ದಾರ್ಥ ತಾಂತ್ರಿಕ ಮಹಾವಿದ್ಯಾಲಯ ಐಕ್ಯೂಎಸಿ, ಮಹಿಳಾ ಬಲವರ್ದನಾ ಕಮಿಟಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ ಅಂತ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ತಮ್ಮ ಅನಿಸಿಕೆ ಹಂಚಿಕೊಂಡ ಅವರು ಸಮಾಜ ದಲ್ಲಿ ಇಂದಿಗೂ ಗಂಡು–ಹೆಣ್ಣು ಗಳೆಂಬ ತಾರತಮ್ಯವಿದ್ದು ಇದಕ್ಕೆ ಉತ್ತರ ಕೊಡುವಂತ ಕಾಲಘಟ್ಟದಲ್ಲಿ ಮಹಿಳೆಯು ಬೆಳೆದಿದ್ದಾಳೆ ಈ ನಿಟ್ಟಿನಲ್ಲಿ ಸಿದ್ದಾರ್ಥ ಶಿಕ್ಷಣ ಸಂಸ್ಥೆಯು ಕೂಡ ಮಹಿಳೆಯನ್ನು ಪ್ರಾತಿನಿಧಿಕವಾಗಿ ಕಂಡಿದ್ದು ಅತಿ ಹೆಚ್ಚು ಮಹಿಳಾ ಉಪನ್ಯಾಸಕರು ಪ್ರಾಧ್ಯಾಪಕರು ಗಳು ಪ್ರಾಂಶುಪಾಲರುಗಳಂತಹ ಹುದ್ದೆಗಳನ್ನು ಸೃಜಿಸಿ ಅವರ ಘನತೆ ಗೌರವಗಳಿಗೆ ರಕ್ಷಣೆ ನೀಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ತಿಳಿಸಿದರು.

ನಾನು ಕೂಡ ಎಫ್ ಕೆ ಸಿ ಸಿ ಐ ಮೊದಲ ಮಹಿಳಾ ಅಧ್ಯಕ್ಷರಾಗಿ ಹೊರಹೊಮ್ಮಿ ಮಹಿಳಾ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದ್ದೇನೆ, ಮಹಿಳೆಯರು ಯಾವ ಕ್ಷೇತ್ರಗಳಲ್ಲಿ ಸಾಧನೆ ಮಾಡಬಹುದು ಎಂಬ ತಾಂತ್ರಿಕವಾದ ಯೋಜನೆಗಳನ್ನು ರೂಪಿಸುತ್ತಾ ಪ್ರತಿ ಶನಿವಾರ ಮಹಿಳೆಯರ ಸಭೆಗಳನ್ನು ನಡೆಸಿ ಮಹಿಳೆಯರು ಆರ್ಥಿಕವಾಗಿ ಸಮಾಜದಲ್ಲಿ ಹೇಗೆ ಬದಲಾವಣೆ ಕಾಣಬೇಕು ಮತ್ತು ಕೈಗಾರಿಕಾ ವಲಯದಲ್ಲಿ ಹೇಗೆ ಸಕ್ರಿಯವಾಗಿರಬೇಕೆಂಬುದರ ಬಗ್ಗೆ ಚರ್ಚೆ ನಡೆಸುತ್ತೇನೆ ಎಂದು ತಿಳಿಸಿದರು.

ಮಹಿಳೆಯರು ಹೆಚ್ಚು ಕೈಗಾರಿಕಾ ವಲಯಗಳಲ್ಲಿ ಗುರುತಿಸಿಕೊಳ್ಳುವ ಸಲುವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಥನ್ ಎಂಬ ಯೋಜನೆಯ ರೂಪಿಸಿದ್ದು ಹೊಸದಾಗಿ ಸಣ್ಣ ಕೈಗಾರಿಕೆ ಉದ್ಯಮ ಸ್ಥಾಪಿಸುವ ಮಹಿಳೆಯರಿಗೆ ಸಹಾಯಧನ ಸೇರಿದಂತೆ ಇತರೆ ಸಹಕಾರಗಳನ್ನು ನೀಡುತ್ತಿದೆ ಇದರ ಬಗ್ಗೆ ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟ ಗೊಳ್ಳುತ್ತಿದ್ದು ಮಹಿಳೆಯರು ಉಪನ್ಯಾಸ ವಿದ್ಯಾಭ್ಯಾಸ ಸಂಸಾರಿಕ ಜೀವನದ ಜೊತೆ ಜೊತೆಗೆ ಕೈಗಾರಿಕಾ ವಲಯದಲ್ಲೂ ಹೆಚ್ಚು ಹೊತ್ತು ನೀಡಿ ಪುರಷರಿಗೆ ಸರಿಸಮಾನ ವಾಗಿ ಬೆಳೆಯಬೇಕು ಎಂದು ಉಮಾರೆಡ್ಡಿ ಅವರು ಕಿವಿಮಾತು ಹೇಳಿದರು.

ಸಾಹೇ ವಿವಿಯ ಉಪಕುಲಪತಿ ಗಳಾದ ಡಾ ಕೆಬಿ.ಲಿಂಗೇಗೌಡ ಅವರು ಮಾತನಾಡಿ ಮಹಿಳೆಯರು ಕೇವಲ ಸೌಂದರ್ಯ ನೋಟಕ್ಕೆ ಒತ್ತು ಕೊಡದೆ ಸ್ಪರ್ಧಾತ್ಮಕವಾಗಿ ಬೆಳೆದಾಗ ಪುರುಷ ರಿಗಿಂತ ಹೆಚ್ಚು ಸಕ್ರಿಯವಾಗಿರಬಹುದು ಇದಕ್ಕೆ ಪೂರಕವಾಗಿ ಸಾಹೇ ವಿವಿಯ ಕುಲಾಧಿಪತಿಗಳಾದ ಡಾ. ಜಿ ಪರಮೇಶ್ವರ್ ಅವರು ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಅಗಣಿತ ಸಾಧನೆಗಳನ್ನು ಗುರುತಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಹೀಗಾಗಿ ಮಹಿಳೆಯರು ಎಲ್ಲಾ ವಲಯದಲ್ಲಿ ಅಳತೆ ಮೀರಿ ಬೆಳೆಯಬೇಕು ಎಂಬುದು ಅವರ ಆಶಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಂಎಸ್ ರವಿಪ್ರಕಾಶ್ ಅವರು ಮಾತನಾಡುತ್ತಾ ಮಹಿಳೆಯರು ದೇವತೆಯ ರೂಪ ಹೊಂದಿದ್ದಾರೆ ಮಹಿಳೆಯರು ಕೇವಲ ಅಡುಗೆ ಮನೆ ಪುರು?ರ ಸೇವೆಗೆ ಮೀಸಲಾಗದೆ ಎಲ್ಲಾ ಕ್ಷೇತ್ರಗಳಲ್ಲೂ ಪರಿಣಿತಿಯನ್ನು ಹೊಂದಿ ಸಾಧನೆಯನ್ನು ಮಾಡಿದ್ದಾರೆ, ಬಾಹ್ಯಾಕಾಶ ಗಗನಯಾನ ಸೇರಿದಂತೆ ಇತರೆ ವಲಯಗಳಲ್ಲಿ ಗಣನೀಯ ಸಾಧನೆ ಮಾಡಿರುವುದು ಶ್ಲಾಘನೀಯವಾಗಿದ್ದು ಮಹಿಳೆಯರು ಸಮಾಜಮುಖಿಯಾಗಿ ಬೆಳೆದರೆ ದೇಶ ನಾಡು ಸಮೃದ್ಧಿಯಾಗುವದರ ಜೊತೆಗೆ ಮಕ್ಕಳನ್ನ ಪುರುಷರನ್ನ ಸರಿಪಡಿಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾಹೇ ವಿವಿಯ ರಿಜಿಸ್ಟ್ರಾರ್ ಡಾ.ಆಶೋಕ್ ಮೆಹ್ತಾ, ಪರೀಕ್ಷಾಂಗ ವಿಭಾಗದ ಡಾ.ಗುರು ಶಂಕರ್, ಡೀನ್ ರೇಣುಕಾಲತಾ, ಐಕ್ಯೂಎಸಿ ಮುಖ್ಯ ಸಂಯೋಜಕರಾದ ಡಾ ವಿ.ರವಿರಾಮ್ , ಡಾ.ಅನಿತಾ ದೇವಿ, ಡಾ ಪೂರ್ಣಿಮಾ, ವಿದ್ಯಾಲಕ್ಷ್ಮೀ ಸೇರಿದಂತೆ ವಿವಿಧ ವಿಭಾಗದ ಮಹಿಳಾ ಮುಖ್ಯಸ್ಥರು ಪ್ರಾಧ್ಯಾಪಕರು ಇತರರು ಉಪಸ್ಥಿತರಿದ್ದರು.

ಸಮಾಜದ ಒಳಿತಿಗೆ ಮಹನೀಯರ ಸ್ಮರಣೆ ಪುಣ್ಯದ ಕೆಲಸ: ಯಮುನಾ ಧರಣೇಶ್

ತಿಪಟೂರು : ಸಮಾಜದ ಒಳಿತಿಗೆ ಶ್ರಮಿಸಿದ ಹಿರಿಯ ಮಹನೀಯರನ್ನು ಸ್ಮರಿಸುವುದು ಪುಣ್ಯದ ಕೆಲಸ ಎಂದು ನಗರಸಭೆ ಅಧ್ಯಕ್ಷೆ ಯಮುನಾ ಧರಣೇಶ್ ತಿಳಿಸಿದರು.

ನಗರದ ಸವಿತಾ ಸಮಾಜ ಸಂಘದ ಸಮುದಾಯ ಭವನದಲ್ಲಿ ತಾಲೂಕು ಸವಿತಾ ಸಮಾಜದ ವತಿಯಿಂದ ಏರ್ಪಡಿಸಿದ್ದ ಶ್ರೀ ಸವಿತಾ ಮಹರ್ಷಿ ಜಯಂತಿ ಮತ್ತು ಶ್ರೀ ತ್ಯಾಗರಾಜ ಸ್ವಾಮಿಯವರ ಆರಾಧನಾ ಮಹೋತ್ಸವ ಕಾರ್ಯಕ್ರಮದಲ್ಲಿ ಸವಿತಾ ಮರ್ಹಷಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ನಮ್ಮ ಪೂರ್ವಜರು ಸಮಾಜದ ಒಳಿತಿಗಾಗಿ ನೀಡಿದ ಮಾರ್ಗದರ್ಶನ ಪಡೆದು ಸಮಾಜದ ಅಭಿವೃದ್ಧಿಗಾಗಿ ಪ್ರತಿಯೊಬ್ಬರು ಶ್ರಮಿಸಬೇಕು. ನಗರಸಭೆಯ ವತಿಯಿಂದ ದೊರೆಯುವ ಸೌಲಭ್ಯವನ್ನು ಸವಿತಾ ಸಮಾಜಕ್ಕೆ ಕೊಡಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ಸವಿತಾ ಸಮಾಜದ ಯುವ ಪಡೆಯ ಸಂಸ್ಥಾಪಕ ಅಧ್ಯಕ್ಷ ಬಿ.ರಂಗನಾಥ್ ಮಾತನಾಡಿ ಸಂಘಟನೆ ಮೂಲಕ ಹೋರಾಟ ಮಾಡಿದಾಗ ಮಾತ್ರ ಸರ್ಕಾರದ ಸವಲತ್ತು ಪಡೆಯಬಹುದು. ಮನುಷ್ಯನ ಹುಟ್ಟು, ಆಕಸ್ಮಿಕ ಆದರೆ ಸಾವು ಖಚಿತ ಆದ್ದರಿಂದ ನಾವು ಈ ಸಮಾಜದಲ್ಲಿ ಹುಟ್ಟಿದ ಮೇಲೆ ಒಂದು ಅಳಿಲು ಸೇವೆಯಾದರು ಸಲ್ಲಿಸಿ ನಮ್ಮ ಜನ್ಮ ಪೂಣ್ಯ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜದ ತಾಲೂಕು ಅಧ್ಯಕ್ಷ ಎ.ಲೋಕೇಶ್ ವಹಿಸಿದ್ದರು. ಈ ಸಂದರ್ಭದಲ್ಲಿ ಸಮುದಾಯ ಭವನದ ಕಾಮಗಾರಿಗೆ ಜಿಲ್ಲಾ ಯುವ ಪಡೆಯ ಜಿಲ್ಲಾಧ್ಯಕ್ಷ ರಂಗನಾಥ್ ರೂ 50ಸಾವಿರ ಮತ್ತು ತಾಲೂಕು ಯುವ ಪಡೆಯ ಪದಾಧಿಕಾರಿಗಳಿಂದ ರೂ 50ಸಾವಿರ ದೇಣಿಗೆ ನೀಡಿದರು. ಕಾರ್ಯಕ್ರಮದಲ್ಲಿ ನಗರಸಭೆಯ ಉಪಾಧ್ಯಕ್ಷೆ ಮೇಘಶ್ರೀ ಭೂಷಣ್, ಸವಿತಾ ಸಮಾಜದ ಮಾಜಿ ಅಧ್ಯಕ್ಷ ಟಿ.ಪಿ.ಗೋವಿಂದರಾಜು, ಮಾಜಿ ಗೌರವಾಧ್ಯಕ್ಷ ಟಿ.ಎಂ.ವರದರಾಜು, ಮಾಜಿ ಪ್ರಧಾನ ಕಾರ್ಯದರ್ಶಿ ಎಸ್. ಕುಮಾರ್, ಗೌರವ ಕಾರ್ಯದರ್ಶಿ ಎಂ.ಸಿ.ಗೋವಿಂದರಾಜು, ನರಸಿಂಹಯ್ಯ, ಯುವಕ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಸವಿತಾ ಸಮಾಜ ಮುಖಂಡರಾದ ಶ್ರೀಧರಬಾಬು, ನವೀನ್, ಗೋಪಿ, ರಾಮು, ರಮೇಶ್, ಅನಿಲ್, ನರಸಿಂಹಮೂರ್ತಿ, ಕುಮಾರ್, ಸವಿತಾ ಸಮಾಜದ ಯುವ ಘಟಕದ ವರದರಾಜು, ಮಾರುತಿ, ಪ್ರವೀಣ್, ಕಿರಣ್ ಮಹಿಳಾ ಸಂಘದ ಪದಾಧಿಕಾರಿಗಳಾದ ಚಂದ್ರಕಲಾ, ನಾಗಮಣಿ, ಅನ್ನಪೂರ್ಣ, ಮಂಜುಳ, ರಾಜಮ್ಮ, ಭಾಗ್ಯಮ್ಮ, ತ್ರಿವೇಣಿ, ಕಲಾವಿದರ ಸಂಘದ ಸದಸ್ಯರು, ಗ್ರಾಮೀಣ ಭಾಗದ ಸವಿತಾ ಸಮಾಜದ ಸದಸ್ಯರು ಮತ್ತಿತರರಿದ್ದರು.

ರಾಜ್ಯ ಸರ್ಕಾರಿ ಗ್ರೇಡ್–1 ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾಗಿ ಡಾ: ಹೆಚ್.ಜೆ. ಉಮೇಶ್ ಆಯ್ಕೆ

ತುಮಕೂರು: ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್–1 ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾಗಿ ಸತತ 2ನೇ ಬಾರಿಗೆ ಡಾ: ಹೆಚ್.ಜೆ.ಉಮೇಶ್ ಆಯ್ಕೆಯಾಗಿದ್ದಾರೆ.

ತುಮಕೂರು ತಾಲ್ಲೂಕು ನಾಗವಲ್ಲಿಯ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಗ್ರೇಡ್–1 ದೈಹಿಕ ಶಿಕ್ಷಕರಾಗಿರುವ ಉಮೇಶ್ ಅವರು ಸಂಘದ ನಿಯಮಾವಳಿಯನ್ವಯ ಮುಂದಿನ 4 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ.

ರಾಜ್ಯ ಸರ